**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.461/2024**

**CW - 12 PW-5**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಂದಯ್ಯ |
| ತಂದೆ | ಃ | ಬಸ್ಸಯ್ಯ |
| ವಯಸ್ಸು | ಃ | 46 |
| ಉದ್ಯೋಗ | ಃ | ಮುಖ್ಯ ಪೇದೆ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **12-03-2026** |

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ನಾನು 2019 ರಿಂದ ಇಲ್ಲಿವರೆಗೆ ಹೆಚ್.ಸಿ ಎಂದು ಗಬ್ಬೂರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 20-04-2024 ರಂದು ನಾನು ಠಾಣೆಯಲ್ಲಿ ಇದ್ದಾಗ ರಾತ್ರಿ 08.30 ಗಂಟೆಗ ಪಿ.ಎಸ್.ಐ ಇವರು ಠಾಣೆಗೆ ಬಂದು ದಾಳಿ ಪಂಚನಾಮೆ ಮತ್ತು ಅವರದಿ ಆಧಾರದ ಮೇಲೆ ಠಾಣ ಗುನ್ನ ನಂ.55/2024 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ಜಪ್ತಿ ಮಾಡಿದ ಮುಮಾಗಳನ್ನು ನ್ಯಾಯಾಲಯಕ್ಕೆ ಪಿ.ಎಫ್ ಂ.45/2024 ಮೂಲಕ ಸಲ್ಲಿಸಿರುತ್ತೇನೆ. ದಿನಾಂಕ 21.04.2024 ರಂದು ಜಪ್ತಿ ಮಾಡಿದ ಮಧ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 09.05.2024 ರಂದು ರಾಸಾಯನಿಕ ವರದಿ ಪಡೆದಿರುತ್ತೇನೆ. ದಿನಾಂಕ 09.05.2024 ರಂದು ಆರೋಪಿ ನಿರೀಕ್ಷಣ ಜಾಮೀನಿನೊಂದಿಗೆ ಠಾಣೆಗೆ ಹಾಜರಾಗಿದ್ದು ಬಂದನದ ನಿಯಮಗಳನ್ನು ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗುರುತಿನ ಬಗ್ಗೆ ವಕೀಲರು ತಕರಾರು ಇಲ್ಲವೆಂದು ಹೇಳಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಹಿಯನ್ನು ನಿಪಿ-3 ಎ ಎಂದು, ಪ್ರ.ವ ವರದಿಯನ್ನು ನಿಪಿ-4 ಎಂದು ಸಹಿಯನ್ನು ನಿಪಿ-

4 ಎ ಎಂದು, ರಾಸಾಯನಿಕ ಪರೀಕ್ಷ ವರದಿಯನ್ನು ನಿಪಿ-5 ಎಂದು ಸಹಿಯನ್ನು ನಿಪಿ-5 ಎ ಎಂದು ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. ARP ವಕೀಲರಿಂದ.**

ಜಪ್ತಿ ಮಾಡಿದ 22 ಬಾಕ್ಸ ಅಕ್ರಮ ಮಧ್ಯವನ್ನು ಸೀಲ್ ಮಾಡಲಾಗಿತ್ತು. ರಾಸಾಯನಿಕ ಪರೀಕ್ಷೆಗೆ ಕಳಿಸುವ ಪೂರ್ವ ನಾನು ಚಾಸಾ-1 ರವರಿಂದ ಜಪ್ತಿ ಮಾಡಿದ ಮಧ್ಯವನ್ನು ಪಡೆದಾಗಿನಿಂದ ಠಾಣೆಯಲ್ಲಿ ಇಟ್ಟಿದ್ದೆ. ಒಂದು ಬಾಕ್ಸನಲ್ಲಿ ಎಷ್ಟು ಮಧ್ಯದ ಪೌಚುಗಳು/ ಬಾಟಲಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಅಕ್ರಮ ಮಧ್ಯವನ್ನು ಜಪ್ತಿ ಮಾಡಿದ ಸ್ಥಳದಲ್ಲಿ ಸೀಲ್ ಮಾಡಿಕೊಂಡು ಬಂದಿರುತ್ತಾರೆ. ರಾಸಾಯನಿಕ ಪರೀಕ್ಷೆಗೆ ಕಳಿಸುವ ಸಮಯದಲ್ಲಿ ಜಪ್ತಿ ಮಾಡುವ ಸಮಯಕ್ಕೆ ಮಾಡಿದ ಸೀಲನ್ನು ನಾನು ತೆಗೆದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ಹೇಳಿಕೆಯನ್ನು ಸಾಕ್ಷಿದಾರರಿಗೆ ಓದಿ ಹೇಳಿರುತ್ತೇನೆ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಚಾಸಾ-1 ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಆರೋಪಿಯ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.